ಕಥೆ

# ಮನದ ಮರ



**ಸಿದ್ದು ಸತ್ಯಣ್ಣವರ**

ಕಲೆ: ವೆಂಕಟ್ರಮಣ ಭಟ್

ಸದಾ ಮಂಕು ಬಡಿದವರಂಗಿರುತ್ತಿದ್ದ ತಿಮ್ಮಣ್ಣ ಈಗೀಗಂತೂ ತನ್ನ ಗುರುತು ತನಗೇ ಗೊತ್ತಿಲ್ಲದವರಂತೆ ಆಡಲು ಶುರುವಿಟ್ಟಿದ್ದ. ಯಾರೋ ಮತ್ತ್ಯಾರನ್ನೋ ಒದರಿದರೆ, ಕರೆದದ್ದು ತನಗಲ್ಲ ಅಂತ ಗೊತ್ತಿದ್ದರೂ ತಿಮ್ಮಣ್ಣ ಫಕ್ಕನೇ ಹೊಳ್ಳಿ 'ಏನು?' ಎನ್ನುತ್ತಿದ್ದ. ತಿಮ್ಮಣ್ಣನ ಪ್ರತಿಕ್ರಿಯೆಗೆ ಒದರಿದವರು, 'ನೀವ ಅಲ್ಲ; ಅವರು' ಎನ್ನುತ್ತಲೇ ಮುಜುಗರದಿಂದ ಬೇರೆಯವರ ಕಡೆ ಕೈ ಸನ್ನೆ ಮಾಡಿ ತೋರಿಸುತ್ತಿದ್ದರು. ತನ್ನ ಪ್ರತಿಕ್ರಿಯೆಗೆ ಅಪರಿಚಿತರು ಮುಜುಗರದಿಂದ ಕ್ಯಾರೇ ಅನ್ನದಿದ್ದರೂ ತಿಮ್ಮಣ್ಣ ಮತ್ತೆ ಅವರತ್ತ 'ಹೀ... ಹೀ' ಎಂದು ಹಲ್ಲು ಕಿಸಿದು ವಿಕ್ಷಿಪ್ತ ನಗೆಯನ್ನು ಮುಖದ ಮೇಲೆ ತರುತ್ತಿದ್ದ.

ಪಕ್ಕದ್ಮನೆ ಶ್ಯಾಮಣ್ಣನ ಹೆಂಡತಿ ಅವತ್ತು ಬೆಳಿಗ್ಗೆ ತರಕಾರಿಯವನಿಗೆ ದುಡ್ಡು ಕೊಡಲು ಕೂಗಿದಳು. ತಿಮ್ಮಣ್ಣ ಅವರ ಮನೆಯ ಕಂಪೌಂಡಿಗೆ ಹತ್ತಿಕೊಂಡೆ ನಿಂತಿದ್ದ. ಆ ಕೂಗು ಕೇಳಿ 'ನಾನಾ, ನಾನಾ, ಕೂಗಿದ್ರಾ' ಅಂತ ಅದೇ ವಿಕ್ಷಿಪ್ತ ನಗೆಯಲ್ಲಿ ಪ್ರಶ್ನಿಸಿದ ತಿಮ್ಮಣ್ಣನ ಮುಖ ಕಂಡಾಗ ವೈಶಾಲಿಗೆ ರೇಗಿ ಹೋತು. 'ಮುಂಜಾನೇಳಾತಲೆ ಇದೆಲ್ಲಿಂದ ಬಂತೋ ಶನಿ. ಅನಿಷ್ಟ ಮುಂಡೇದು, ಬೆಳಗಾ ಮುಂಜೇಳಾತ್ಲೆ ಮುಖ ತೋರಿಸ್ತು, ಮೂಳಾ ಊರ ಮೂಳಾ' ವಟಗುಟ್ಟುತ್ತಾ ಒಳಗೆ ಹೋದವಳು ಅಲ್ಲಿ ಗಂಡನ ಮೇಲೆ ಸಿಡಿಮಿಡಿಗುಟ್ಟಿದಳು. ತೋಳ ತೆಕ್ಕೆಯಲಿ ರಾತ್ರಿಪೂರಾ ಬಿದ್ದು ಹೊಳ್ಳಾಡಿ, ಎದೆ ಮೇಲೆ ಮೂತಿ ಇಟ್ಟು ಭೋರಿಟ್ಟವಳು, ಸೂರ್ಯ ಹುಟ್ಟುವಷ್ಟರಲ್ಲಿ ಹಾಸಿಗೆಯೊಳಗಿಂದ ಸೀರೆ ಬಿಡಿಸಿಕೊಂಡು ಉಟಗೊಂಡ ಹೋದವಳು, ಜಳಕ ಮಾಡಿದ ಕೂಡಲೇ ಏನಾತು ಇವಳಿಗೆ ಅಂತಾ ಆಕಳಿಸುತ್ತಲೇ ಶ್ಯಾಮಣ್ಣ ಮುಸುಕು ಸರಿಸಿ ಮೇಲೆದ್ದು ಮೈ ಮುರಿಯುತ್ತಲೇ ಪಾಯಖಾನೆ ಕಡೆ ಹೋದ.

ವೈಶಾಲಿ ಸಾಪಳಿಸಿದ್ದು ಕಿವಿಗೆ ಬಿದ್ದರೂ, ಆಕೀ ನನಗೇನೂ ಅಂದೇ ಇಲ್ಲ. ಏನೂ ಆಗೇ ಇಲ್ಲ ಅನ್ನೋ ತೆರದಲಿ ತಿಮ್ಮಣ್ಣ ನಿರ್ಲಿಪ್ತನಾಗಿದ್ದ. ಮುಖದ ಮೇಲಿನ ದಾಡಿ ಮೇಲೆ ಕೈ ಆಡಿಸಿಕೊಳ್ಳುತ್ತ ಮೆಟ್ಟಿಲು ಹತ್ತಿ ಬಾಲ್ಕನಿ ಕಡೆಗೆ ಹೆಜ್ಜೆ ಹಾಕಿದ. ಒಂದರ್ಥದಲ್ಲಿ ಹೇಳಬೇಕಂದರೆ ದಿನಾ ಹೀಗೆ ಉಗಿಸಿಕೊಳ್ಳೋದು ಆತನ ದೈನಂದಿನ ಜೀವನದ ಒಂದು ಭಾಗವೇ ಆಗಿತ್ತು. ಆದರೆ ಹಿಂಗಾದಾಗೆಲ್ಲಾ ಏನೂ ಆಗೇ ಇಲ್ಲ ಎಂಬಂತೆ ಇದ್ದ್ ಬಿಡೋದು ಸಹಿತ ತಿಮ್ಮಣ್ಣನ ಬದುಕಿನ ಅಲಿಖಿತ ನಿಯಮಗಳಲ್ಲೊಂದರಂಗಾಗಿತ್ತು. ತಿಮ್ಮಣ್ಣನ ಮನೆ ಮುಂದೆ ಅವರಪ್ಪನ ಕಾಲಕ್ಕಿಂತಲೂ ಮುಂಚಿತವಾದ ದೊಡ್ಡ ಆಲದ ಗಿಡವೊಂದಿತ್ತು. ಅದರ ದೊಡ್ಡ ಬಡ್ಡಿಯನ್ನ ಗಮನಿಸಿದರೇನೆ ಇದೆಷ್ಟು ಹಳೇಯದು ಇರಬಹುದು ಎಂದು ಯೋಚನೆ ಮಾಡಬೇಕು, ಹಾಗಿತ್ತು ಅದರ ಆಕಾರ. ನೆಲಕ್ಕೆ ಹತ್ತುವಂತೆ ಇಳಿಬಿದ್ದಿದ್ದ ಅದರ ಬಿಳಲುಗಳ ಗುಂಪು ಆಲದ ಮರದ ಆಯುಷ್ಯ ಸೂಚಿಸುವಂತಿದ್ದವು. ಅದರ ಬುಡದಲಿ ಕೋಟ್ಯಾನುಗಟ್ಟಲೇ ಕೆಂಪಿರುವಿ, ಕಪ್ಪ ಇರುವಿ ಮಣ್ಣಿನ ಗೂಡಿನಿಂದ ಹೊರಗ ಬಂದು ಮೈಮೇಲಿನ ರೋಮದಂತೆ ಇಡೀ ಮರದ ತುಂಬಾ